**ದಿನಾಂಕ 25-09-2024 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ.ಜಿ.ಎಸ್.ಪಿ ವಕೀಲರಿಂದ ಪ್ರತಿವಾದಿ ಪರವಾಗಿ**

1. ವಾದಪತ್ರದೊಂದಿಗೆ ನೀವು ವಂಶಾವಳಿಯನ್ನು ಹಾಜರಪಡಿಸಿಲ್ಲ ಎಂದರೆ ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ರಾಮಣ್ಣ, ನನ್ನ ಅಜ್ಜನ ಹೆಸರು ಪಾಂಡಪ್ಪ. ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಎಂದು ತೋರಿಸಲು ವಾದ ಪತ್ರದಲ್ಲಿ ವಿವರಗಳನ್ನು ಬರೆದಿಲ್ಲ ಎಂದರೆ ವಾದ ಪತ್ರದಲ್ಲಿ ಬರೆದಿದೆ ಎಂದು ಹೇಳುತ್ತಾರೆ. ದಾವಾ ಆಸ್ತಿ ನನ್ನ ತಂದೆಯ ತಾಯಿಯಿಂದ ಬಂದ ಆಸ್ತಿಗಳು ಇವೆ. ನನ್ನ ತಂದೆಯ ತಾಯಿಯ ಹೆಸರು ಬಸವ್ವ ನಾರಾಯಣಪ್ಪ ಹೂಗಾರ. ನಾರಯಣಪ್ಪ ಇವರು ನನ್ನ ಅಜ್ಜಿಯ ತಂದೆ. ದಾವಾ ಆಸ್ತಿಗಳಲ್ಲಿ ಕೆಲವೊಂದು ಆಸ್ತಿಗಳು ನಿಮ್ಮ ಅಜ್ಜಿ ಇವರು ದುಡಿದು ಗಳಿಸಿದ ಆಸ್ತಿಗಳು ಎಂದರೆ ಸರಿ. ಸರ್ವೆ ನಂ.73 ರ ಆಸ್ತಿಯನ್ನು 1994 ನೇ ಸಾಲಿನಲಲ್ಲಿ ಸ್ವಂತ ದುಡಿಮೆಯಿಂದ ನಿಮ್ಮ ತಂದೆಯವರು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆ ರಾಮಪ್ಪನಿಗೆ ಪಾಂಡಪ್ಪನಿಂದ ಯಾವುದೇ ಆಸ್ತಿ ಬಂದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಯಾವ ಆಸ್ತಿ ಬಂದಿದೆ ಎಂದರೆ ದಾವಾ ಆಸ್ತಿಗಳಲ್ಲಿ ಯಾವುದೇ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಯಾವ ಆಸ್ತಿ ನಿಮ್ಮ ಅಜ್ಜ ಪಾಂಡಪ್ಪನಿಂದ ರಾಮಪ್ಪ ಅವರಿಗೆ ಬಂದಿದೆ ಎಂದರೆ ಉದಗಟ್ಟಿಯಲ್ಲಿ ಇದ್ದ ಆಸ್ತಿಯನ್ನು ನನ್ನ ತಂದೆ ಮಾರಾಟ ಮಾಡಿದ್ದು, ಅದರ ಸರ್ವೆ ನಂಬರ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆ ರೀತಿ ಉದಗಟ್ಟಿಯಲ್ಲಿ ಇದ್ದ ಆಸ್ತಿಯನ್ನು ಮಾರಾಟ ಮಾಡಿದ್ದರು ಎಂದು ದಾವೆಯಲ್ಲಿ ಬರೆಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಅದೇ ರೀತಿ ನಿಮ್ಮ ತಾಯಿ 2 ನೇ ಪ್ರತಿವಾದಿ ಅನ್ನಪೂರ್ಣಾ ಇವರು ತಮ್ಮ ತವರು ಮನೆಯಿಂದ ಬಂದ ಮೊತ್ತದಿಂದ ಸರ್ವೆ ನಂ.73/1 ಕ್ಷೇತ್ರ 7 ಎಕರೆ 8 ಗುಂಟಾ ಆಸ್ತಿಯನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಅಜ್ಜಿಯ ಹೆಸರು ಬಸವ್ವ ಅವರ ಆಸ್ತಿಯನ್ನು ಮಾರಾಟ ಮಾಡಿ 2 ಆಸ್ತಿಗಳನ್ನು ಖರೀದಿಸಿದ್ದಾರೆ ಎಂದು ಹೇಳುತ್ತಾರೆ.

2. ಅನ್ನಪೂರ್ಣಾ ಅವರು ಸರ್ವೆ ನಂ.73/1 ಕ್ಷೇತ್ರ 7 ಎಕರೆ 8 ಗುಂಟೆ ಆಸ್ತಿಯನ್ನು ದಿಃ11.08.2000 ರಂದು ತಿಮ್ಮಪ್ಪ ರಾಮಪ್ಪ ನೇಗಲಿಹಾಳ ಅವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನಮಗೆ ಗೊತ್ತಿರದೆ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ಸದರಿ ಖರೀದಿಸಿದ

ಆಸ್ತಿಯ ಸ್ವಾಧೀನುಭವದಲ್ಲಿ ಈಗ ಮೃತ ತಿಮ್ಮಪ್ಪನ ವಾರಸುದಾರರಾದ ಪ್ರತಿವಾದಿ ನಂ.10 ರಿಂದ 13 ರವರೆ ಇದ್ದಾರೆ ಎಂದರೆ ಸರಿ. ಅದೇ ರೀತಿ ನಿಮ್ಮ ತಂದೆ 1 ನೇ ಪ್ರತಿವಾದಿಯವರು ತಾವು ಖರೀದಿಸಿದ ಸರ್ವೆ ನಂ.73/2 ರ ಆಸ್ತಿಯನ್ನು ತಿಮ್ಮಪ್ಪ ಅವರಿಗೆ ದಿಃ11.08.2000 ರಂದು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಜಮೀನಿನ ಸ್ವಾಧೀನುಭವದಲ್ಲಿ ಈಗಲೂ ತಿಮ್ಮಪ್ಪನ ವಾರಸುದಾರರಾದ ಪ್ರತಿವಾದಿ ನಂ.10 ರಿಂದ 13 ರವರೆ ಇದ್ದಾರೆ ಎಂದರೆ ಸರಿ.

3. ಮೇಲೆ ಹೇಳಿದಂತೆ ದಿಃ11.08.2000 ದಂದು ಮಾರಾಟ ಮಾಡಿದ ನಂತರ ಸರ್ವೆ ನಂ.73/2 ರ 14 ಗುಂಟೆ ಜಮೀನನ್ನು ಸರಕಾರದವರು ಭೂಸ್ವಾದೀನ ಮಾಡಿಕೊಂಡಿದ್ದಾರೆ ಎಂದರೆ ಸರಿ. ಅದರಂತೆ ಸರ್ವೆ ನಂ.73/1 ರಲ್ಲಿ ಕ್ಷೇತ್ರ 3 ಗುಂಟೆ ಆಸ್ತಿಯನ್ನು ಭೂ ಸ್ವಾಧೀನ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹಣಮಂತ ಚೂರಿ ಎನ್ನುವವರು ನಿಮ್ಮ ಮನೆತನಕ್ಕೆ ಸಂಬಂಧದವರಲ್ಲ ಎಂದರೆ ಸರಿ. ಹಣಮಂತ ಚೂರಿ ಇವರು ಸರ್ವೆ ನಂ.16/1 ಎ ರಲ್ಲಿ 1 ನೇ ಪ್ರತಿವಾದಿಗೆ ಲೋಕಣ್ಣ ಮತ್ತು ಆನಂದ ಇವರಿಗೆ ಹಕ್ಕು ಬಿಟ್ಟು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂ.16/1 ರ ಪೈಕಿ 2 ಎಕರೆ 34 ಗುಂಟೆ ಆಸ್ತಿಯನ್ನು ಹಣಮಂತ ಚೂರಿ ಅವರು ರಾಮಪ್ಪನಿಗೆ ಹಿಸ್ಸೆ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.16/1 ಕೆ ಹಾಗೂ 16/1 ಎಫ್ ರ ಆಸ್ತಿಗಳನ್ನು 1 ನೇ ಪ್ರತಿವಾದಿ, ಪ್ರತಿವಾದಿ ನಂ.9 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಮಾರಾಟ ಮಾಡಿದ್ದಾರೆ, ಆದರೆ ನಮಗೆ ಗೊತ್ತಿಲ್ಲದಂತೆ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ಈಗಲೂ ಸಹ ಸದರಿ ಆಸ್ತಿ ಪ್ರತಿವಾದಿ-9 ರವರ ಸ್ವಾಧೀನದಲ್ಲಿ ಇದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲು ಮಾಡಲು ಸಮಯವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ . ಹೇ. ಕೆ . ಸರಿ ಅದೆ .

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ